ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE : 20/4/21

# ಬೀದರ್, ರಾಮನಗರದ 2 ಗ್ರಾಮ ಸ್ವಯಂ ಲಾಕ್‌ಡೌನ್

## ಬಾವಗಿ, ಕುದೂರು 10-15 ದಿನ ಬಂದ್‌ಗೆ ಜನರ ನಿರ್ಧಾರ

## ಅಗತ್ಯ ವಸ್ತು ಖರೀದಿಗೆ ಸಮಯ | ಹೊರಗಿನವರಿಗೆ ನಿಷೇಧ

• **ಕನ್ನಡಪ್ರಭ ವಾರ್ತೆ** ಬೀದರ್ / ರಾಮನಗರ 20/4/21

ಕೊರೋನಾ 2ನೇ ಅಲೆ ತಡೆಗೆ ಸರ್ಕಾರ ಲಾಕ್‌ಡೌನ್ ಘೋಷಣೆ ಮಾಡುತ್ತದೆಯೋ ಅಥವಾ ಇತರೆ ಕಠಿಣ ನಿರ್ಧಾರ ಕೈಗೊಳ್ಳುತ್ತದೆಯೋ ಎಂಬುದು ಮಂಗಳವಾರ ತಿಳಿದು ಬರಲಿದೆ. ಈ ನಡುವೆ ಬೀದರ್ ತಾಲೂಕಿನ ಬಾವಗಿ ಮತ್ತು ರಾಮನಗರ ಜಿಲ್ಲೆಯ ಕುದೂರು ಗ್ರಾಮಸ್ಥರು ತಮ್ಮ ಊರಿನಲ್ಲಿ ಸ್ವಯಂಪ್ರೇರಿತ ಲಾಕ್‌ಡೌನ್ ಜಾರಿಗೊಳಿಸಿದ್ದಾರೆ. ಬೀದರ್‌ನ ಸಂಗೊಳಗಿ ಗ್ರಾ.ಪಂ. ವ್ಯಾಪ್ತಿಯ ಬಾವಗಿಯಲ್ಲಿ 3000 ಜನಸಂಖ್ಯೆ ಇದ್ದು, ಈಗಾಗಲೇ 6 ಜನರಿಗೆ ಸೋಂಕು ದೃಢವಾಗಿದೆ.

➘ 9

ಕೊರೋನಾ ತಡೆಗೆ ಸಖತ್ ನಿರ್ಧಾರ



ಬೀದರ್ ತಾಲೂಕಿನ ಬಾವಗಿ ಗ್ರಾಮದಲ್ಲಿ ಜನರು ಸ್ವಯಂಪ್ರೇರಿತವಾಗಿ ಲಾಕ್‌ಡೌನ್ ಮಾಡಿರುವುದು.

# ಬೀದರ್, ರಾಮನಗರದ 2 ಗ್ರಾಮ ಸ್ವಯಂ ಲಾಕೌನ್

➘ ಮೊದಲ ಪುಟದಿಂದ ಕ.ಪ್ರ 20/4/21

ಈ ಹಿನ್ನೆಲೆಯಲ್ಲಿ ಸೋಮವಾರ ಇಲ್ಲಿನ 6 ಗ್ರಾ.ಪಂ. ಸದಸ್ಯರು ಹಾಗೂ ಗ್ರಾಮದ ಹಿರಿಯರೆಲ್ಲರೂ ಸೇರಿ ಮುಂದಿನ 10 ದಿನಗಳವರೆಗೆ ಲಾಕ್‌ಡೌನ್ ಘೋಷಣೆ ಮಾಡಿದ್ದಾರೆ. ಬೆಳಗ್ಗೆ ಹಾಗೂ ಸಂಜೆ 6ರಿಂದ 8ರವರೆಗೆ ಮಾತ್ರ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿದೆ. ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಗ್ರಾಮಕ್ಕೆ ಯಾರೊಬ್ಬರೂ ಹೊರಗಿನವರು ಬರದಂತೆ ಎಚ್ಚರ ವಹಿಸಲು ತೀರ್ಮಾನಿಸಲಾಗಿದೆ.